ಬೆಂಗಳೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಅವ್ಯವಹಾರ.

3047:(4146)

ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಲ ಕರ್ನಾಟಕ ಯೋಜನೆ ಜಾರಿಗೆ ತಂದಿರುವುದು ನಿಜವೇ?

ಆ) ಸದರಿ ಯೋಜನೆಯಿಂದ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು? (ಪಟ್ಟಿ ಒದಗಿಸುವುದು)

ಇ) ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್.ಸಚಿವರು):

ಅ) ಬೆಂಗಳೂರು (ನಗರ) ಜಿಲ್ಲಾ ಪಂಚಾಯತಿಯೂ ಸೇರಿದಂತೆ, ರಾಜ್ಯದ ಎಲ್ಲಾ ಜಿಲ್ಲಾಪಂಚಾಯತ್‌ಗಳಡಿ ''ನಿರ್ಮಲಗ್ರಾಮ ಯೋಜನೆ'' ಅನುಷ್ಠಾನದಲ್ಲಿದೆ.

ಆ) ಬೆಂಗಳೂರು (ನಗರ) ಜಿಲ್ಲಾ ಪಂಚಾಯತಿಯಡಿ ನಿರ್ಮಲ ಗ್ರಾಮ ಯೋಜನೆಯಿಂದ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ. 17394. (ಪಟ್ಟಿಯನ್ನು ಪಡೆಯಲಾಗುತ್ತಿದೆ)

ಇ) ಬೆಂಗಳೂರು (ಉತ್ತರ) ತಾಲ್ಲೂಕಿನಲ್ಲಿ ಶೌಚಾಲಯಗಳ ನಿರ್ಮಾಣಕ್ಕಾಗಿ 1996-97ನೇ ಸಾಲಿನಲ್ಲಿ ಸಾಮಗ್ರಿಗಳ: ಸಹಾಯಧನ ವಿತರಣೆಯಲ್ಲಿ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಡಲಾಗಿದ್ದು ಇಲಾಖೆ ವಿಚಾರಣೆ ನಡೆಸಲಾಗುತ್ತಿದೆ.

ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿರುವ ಪ್ರೌಢ ಶಾಲೆಗಳು ಹಾಗೂ